ಕ್ರಾಂತಿಯಕಿಡಿ
ಕಾಯಕಯೋಗಿ
KAYAKAYOGI-MORNING DAILY
ಕನ್ನಡ ದಿನಪತ್ರಿಕೆ
ಪುಟ-02
ಶನಿವಾರ
24 ಜುಲೈ 2021

ನಗರಸಭೆ ಯೋಜನಾಧಿಕಾರಿ ವೆಂಕಟನಾಯ್ಕರಿಗೆ ಸನ್ಮಾನ

ಚಾಮರಾಜನಗರ : ಸಾರ್ವಜನಿಕರ ಕೆಲಸಗಳನ್ನು ಉತ್ತಮವಾಗಿ ಸ್ಪಂದಿಸಿ ಕಾರ್ಯ ನಿರ್ವಹಿಸುತ್ತಿರುವ ನಗರಸಭೆ ಯೋಜನಾಧಿಕಾರಿ ವೆಂಕಟನಾಯ್ಕ ಅವರನ್ನು ಚೆಸ್ಕಾಂ ನಿವೃತ್ತ ಕಿರಿಯ ಇಂಜಿನಿಯರ್ ಹಾಗೂ ಸಮಾಜ ಸೇವಕ ಡಾ.ಪರಮೇಶ್ವರಪ್ಪ ಅವರು ಗೌರವಿಸಿ ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ಪರಮೇಶ್ವರಪ್ಪ ಅವರು ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಸದಾ ಹಸನ್ಮುಖಿಯಿಂದಲೇ ಸ್ಪಂದಿಸಿ ವೆಂಕಟನಾಯ್ಕ ಅವರು ಕೆಲಸ ಮಾಡುತ್ತಿದ್ದು ಅವರ ಸೇವಾ ಕರ್ತವ್ಯ ನಿಷ್ಠೆ ಹೀಗೆ ಮುಂದುವರಿಯಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ನಗರಸಭೆ ಸಿಬ್ಬಂದಿಗಳಾದ ಸಂತೋಷ್.ನವೀನ್ ಇದ್ದರು.

ಆರೋಗ್ಯದಿಂದಿರಿ-ಸುರಕ್ಷಿತವಾಗಿರಿ, ನಾವೆಲ್ಲರು ಒಟ್ಟಾಗಿ ಕೊರೋನಾ ವಿರುದ್ಧ ಹೋರಾಡೋಣ.

ಹೆದ್ದಾರಿ ಕೆಳ ಸೇತುವೆ ನಿರ್ಮಾಣಕ್ಕೆ ಆಗ್ರಹ

ಟಿ.ಎಂ.ಹೊಸೂರು ಬಳಿ ಪ್ರತಿಭಟನೆ : ಶಾಸಕ ಭೇಟಿ

ಮಂಡ್ಯ : ಶ್ರೀರಂಗಪಟ್ಟಣ ತಾಲ್ಲೂಕಿನ ಟಿ.ಎಂ.ಹೊಸೂರು ಮಾರ್ಗಕ್ಕೆ ತೆರಳಲು ಬೆಂಗಳೂರು-ಮೈಸೂರು ಹೆದ್ದಾರಿ ಎಂಟು ಪಥದ ರಸ್ತೆ ಕಾಮಗಾರಿಯಲ್ಲಿ ಕೆಳ ಸೇತುವೆ ನಿರ್ಮಿಸುವಂತೆ ಆಗ್ರಹಿಸಿ ನೂರಾರು ಮಂದಿ ಕಾಮಗಾರಿ ತಡೆದು ಪ್ರತಿಭಟನೆ ನಡೆಸಿದರು.

ಟಿ.ಎಂ.ಹೊಸೂರು ಗೇಟ್ ಬಳಿ ಜಮಾಯಿಸಿದ ಟಿ.ಎಂ.ಹೊಸೂರು, ಕಾಳೇನಹಳ್ಳಿ, ನೀಲನಕೊಪ್ಪಲು ಅಲ್ಲಾಪಟ್ಟಣ ಸೇರಿದಂತೆ ಇತರೆ ಗ್ರಾಮಗಳ ಗ್ರಾಮಸ್ಥರು ಕಾಮಗಾರಿ ತಡೆದು ಆಕ್ರೋಶ ವ್ಯಕ್ತಪಡಿಸಿ ಕೆಳ ಸೇತುವೆ ನಿರ್ಮಿಸಿಕೊಡುವಂತೆ ಆಗ್ರಹಿಸಿದರು.

ಬೆಂಗಳೂರು-ಮೈಸೂರು ಹೆದ್ದಾರಿಯಿಂದ ಟಿ.ಎಂ.ಹೊಸೂರು, ಕಾಳೇನಹಳ್ಳಿ, ಅಲ್ಲಾಪಟ್ಟಣ, ನೀಲನಕೊಪ್ಪಲು, ಆಲಗೂಡು, ಚಿಕ್ಕನಹಳ್ಳಿ, ಕೊಡಿಯಾಲ ಸೇರಿದಂತೆ ಹತ್ತಾರು ಗ್ರಾಮಗಳ ಮೂಲಕ ಮಂಡ್ಯ ನಗರ ಸೇರುವ ಈ ರಸ್ತೆಯಲ್ಲಿ ಪ್ರತಿನಿತ್ಯ ಬಸ್ಸು, ಲಾರಿ, ಟ್ರಾಕ್ಟರ್, ಟಿಪ್ಪರ್ ಸೇರಿದಂತೆ ಸಾವಿರಾರು ವಾಹನಗಳು ಸಂಚರಿಸುತ್ತಿರುತ್ತವೆ. ಅಲ್ಲದೆ ಹೆದ್ದಾರಿ ಕಾಮಗಾರಿಗೆ ಅನುಕೂಲವಾಗುವ ಉದ್ದೇಶದಿಂದ ಈ ಭಾಗದಿಂದಲೇ ಗಣಿಗಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ. ಹೀಗಿದ್ದರೂ ಇಲ್ಲಿನ ಜನತೆಯ ಸಂಚಾರಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುತ್ತಿಲ್ಲ ಎಂದು ಕಿಡಿಕಾರಿದರು. ಈ ಮಾರ್ಗವಾಗಿ ಕೆಳ ಸೇತುವೆ ನಿರ್ಮಿಸದಿದ್ದಲ್ಲಿ ಕಂಪನಿಗೆ ಕಣಿಗಾರಿಕೆಗೆ ಅವಕಾಶಕೊಡುವುದಿಲ್ಲ ಜೊತೆ ಗೆ ಕಾಮಗಾರಿಯನ್ನು ಸಂಪೂರ್ಣವಾಗಿ ತಡೆ ಹಿಡಿಯುವುದಾಗಿ ಎಚ್ಚರಿಸಿದರು.

ಇದೇ ವೇಳೆ ಹೆದ್ದಾರಿ ಕಾಮಗಾರಿ ವೀಕ್ಷಣೆಗೆ ಆಗಮಿಸಿದ್ದ ಶಾಸಕ ರವೀಂದ್ರ ಶ್ರೀಕಂಠಯ್ಯ ಸಂಬಂಧಪಟ್ಟ ಹೆದ್ದಾರಿ ಕಾಮಗಾರಿ ಮುಖ್ಯಸ್ಥರನ್ನು ಕರೆಸಿ ಈ ಮಾರ್ಗಕ್ಕೆ ಕೆಳ ಸೇತುವೆ ಕಡ್ಡಾಯವಾಗಿ ಆಗಲೇಬೇಕೆಂದು ಮನವರಿಕೆ ಮಾಡಿಕೊಟ್ಟರಲ್ಲದೇ ಗ್ರಾಸ್ಥರನ್ನು ಸಮಾಧಾನಪಡಿಸಿ, ಹೆದ್ದಾರಿ ಕಾಮಗಾರಿಗೆ ಯಾರು ತೊಂದರೆ ಕೊಡುವುದು ಬೇಡ. ಕೆಳ ಸೇತುವೆ ನಿರ್ಮಾಣಕ್ಕಾಗಿ 1-2 ತಿಂಗಳುಗಳ ಕಾಲ ಕಾಲಾವಕಶಕೊಟ್ಟು ನೋಡೋಣ ಸೇತುವೆ ನಿರ್ಮಾಣ ಮಾಡದಿದ್ದರೆ ಗ್ರಾಮಸ್ಥರ ಜೊತೆಗೂಡಿ ನಾನು ಸಹ ಪ್ರತಿಭಟನೆಗೆ ಇಳಿಯಬೇಕಾಗುತ್ತಿದೆ ಎಂದು ಎಚ್ಚರಿಸಿದರು.

ಈ ಸಂಬಂಧ ಮೈಸೂರು ಸಂಸದ ಪ್ರತಾಪ್‌ಸಿಂಹ ಅವರೊಂದಿಗೆ ಚರ್ಚೆ ನಡೆಸಿದ್ದೇನೆ. ಅವರು ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮತ್ತೊಮ್ಮೆ ಪ್ರತಾಪ್‌ಸಿಂಹ ಹಾಗೂ ಮಂಡ್ಯ ಸಂಸದೆ ಸುಮಲತಾ ಅವರೊಂದಿಗೆ ಈ ವಿಷಯವಾಗಿ ಮಾತನಾಡಲಿದ್ದೇನೆ ಎಂದರು.

ಶಾಸಕರು ಹಾಗೂ ಗ್ರಾಮಸ್ಥ ಮನವಿಗೆ ಒಪ್ಪಿಗೆ ಸೂಚಿಸಿದ ಹೆದ್ದಾರಿ ಕಾಮಗಾರಿ ಮುಖ್ಯಸ್ಥರು, ಕೂಡಲೇ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು ಎರಡು ತಿಂಗಳೊಳಗಾಗಿ ಕೆಳ ಸೇತುವೆ ನಿರ್ಮಾಣಕ್ಕೆ ಚಾಲನೆ ನೀಡುವುದಾಗಿ ಭರವಸೆ ನೀಡಿದರು. ಪ್ರತಿಭಟನೆ ಹಿಂಪಡೆದ ಗ್ರಾಮಸ್ಥರು, ಕೆಳ ಸೇತುವೆ ನಿರ್ಮಾಣ ಆರಂಭವಾಗುವವರೆವಿಗೂ ಈ ಸ್ಥಳದಲ್ಲಿ ಯಾವುದೇ ಕಾಮಗಾರಿ ನಡೆಸದಂತೆ ಎಚ್ಚರಿಕೆ ನೀಡಿದರು.

ಈ ವೇಳೆ ತಹಸೀಲ್ದಾರ್ ಎಂ.ವಿ.ರೂಪ ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಸ್ಥರು ಉಪಸ್ಥಿತರಿದ್ದರು.

ನಾಳೆ ಪಿಎಸ್‌ಎಸ್‌ಕೆ ಕಾರ್ಖಾನೆ ಬಾಯ್ಲರ್‌ಗೆ ಅಗ್ನಿಸ್ಪರ್ಶ

ಪಾಂಡವಪುರ : ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ (ಪಿಎಸ್‌ಎಸ್‌ಕೆ) ಗುತ್ತಿಗೆ ಪಡೆದಿರುವ ಮುರುಗೇಶ್ ಆರ್.ನಿರಾಣಿ ಶುಗರ್ಸ್ ಗ್ರೂಪ್ಸ್ ಕಂಪೆನಿ ಎರಡನೇ ಹಂಗಾಮಿನ ಕಬ್ಬು ನುರಿಸುವಿಕೆಗೆ ತಯಾರಿ ನಡೆಸಿದ್ದು, ಇದೇ ಜುಲೈ 25ರಂದು ಭಾನುವಾರ ಬಾಯ್ಲರ್‌ಗೆ ಅಗ್ನಿಸ್ಪರ್ಶ ಮಾಡಲಿದೆ.

ಪ್ರಸಕ್ತ ಸಾಲಿನಲ್ಲಿ ಪಿಎಸ್‌ಎಸ್‌ಕೆ ಕಾರ್ಖಾನೆ ವ್ಯಾಪ್ತಿಯಲ್ಲಿ 8 ಲಕ್ಷ ಟನ್ ಕಬ್ಬು ಲಭ್ಯವಿದ್ದು, ಪ್ರತಿನಿತ್ಯ 3500 ಟನ್ ಕಬ್ಬು ನುರಿಸಲಾಗುವುದು. ಜುಲೈ 25ರಂದು ಬೆಳಗ್ಗೆ 9.30ಕ್ಕೆ ಬಾಯ್ಲರ್‌ಗೆ ಅಗ್ನಿ ಸ್ಪರ್ಶ ಹಾಗೂ ಜುಲೈ 29ರಂದು ಕಬ್ಬು ನುರಿಸುವಿಕೆಗೆ ಕಾರ್ಖಾನೆ ಆವರಣದಲ್ಲಿ ಪೂಜಾ ಕಾರ್ಯ ನಡೆಯಲಿದೆ.

ಕಾರ್ಖಾನೆ ಕಾರ್ಮಿಕರು, ಕಬ್ಬು ಬೆಳೆಗಾರರು ಹಾಗೂ ಆಹ್ವಾನಿತ ಗಣ್ಯರು ಈ ಎರಡು ಕಾರ್ಯಕ್ರಮಗಳಲ್ಲೂ ಪಾಲ್ಗೊಳ್ಳಬೇಕು ಎಂದು ಕಾರ್ಖಾನೆಯ ಮುಖ್ಯ ವ್ಯವಸ್ಥಾಪಕ ಶಿವಾನಂದ ಸಲಗಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಖಾನೆ ಬಾಯ್ಲರ್‌ಗೆ ಅಗ್ನಿಸ್ಪರ್ಶವಾಗುತ್ತಿರುವ ಹಿನ್ನೆಲೆ ಕಾರ್ಖಾನೆ ವ್ಯಾಪ್ತಿಯ ಕಬ್ಬು ಬೆಳೆಗಾರರು ಹರ್ಷಗೊಂಡಿದ್ದಾರೆ. ಕಳೆದ ಹಂಗಾಮಿನಲ್ಲಿ ಆಗಸ್ಟ್ ಮಾಹೆಯಲ್ಲಿ ಕಬ್ಬು ನುರಿಸುವಿಕೆ ಪ್ರಾರಂಭಿಸಲಾಗಿತ್ತು. ಈ ಹಂಗಾಮಿನಲ್ಲಿ ಒಂದು ತಿಂಗಳು ಮುಂಚಿತವಾಗಿ ಕಾರ್ಖಾನೆ ಪ್ರಾರಂಭವಾಗುತ್ತಿರುವುದು ರೈತರಿಸಿ ಸಂತಸ ಮೂಡಿಸಿದೆ.

ಕಾರ್ಖಾನೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಆಲೆಮನೆ ಮಾಲೀಕರು ಕೇಳಿದ ದರಕ್ಕೆ ಕಬ್ಬು ಮಾರಾಟ ಮಾಡಬೇಕಾದ ಪರಿಸ್ಥಿತಿಯಿಂದ ರೈತರು ಹೊರ ಬಂದಿದ್ದಾರೆ. ಕಾರ್ಖಾನೆ ಗುತ್ತಿಗೆ ಪಡೆದ ನಂತರ ಎರಡನೇ ಹಂಗಾಮಿನ ಕಬ್ಬು ನುರಿಸಲು ಎಂಆರ್‌ಎನ್ ಶುಗರ್ಸ್ ಕಂಪೆನಿ ಸಿದ್ಧತೆ ಮಾಡಿಕೊಂಡಿದ್ದು, ಕನಿಷ್ಠ 7ರಿಂದ 8 ತಿಂಗಳು ಕಾಲ ಕಬ್ಬು ನುರಿಸಲಾಗುವುದು. ಕಾರ್ಖಾನೆ ವ್ಯಾಪ್ತಿಯಲ್ಲಿ ಲಭ್ಯವಿರುವ ಕಬ್ಬು ನುರಿಸುವಿಕೆಗೆ ಯಾವುದೇ ತೊಂದರೆ ಇಲ್ಲ ಎಂದು ಶಿವಾನಂದ ಸಲಗಾರ್ ಹೇಳಿದ್ದಾರೆ.

ಪಿ.ಎಂ.ವೈ.ಎ ವತಿಯಿಂದ ಆರ್ಥಿಕ ನೆರವು

ಮಂಡ್ಯ : ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಆರು ವರ್ಷಗಳನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರ ಮಂತ್ರಾಲಯವು ಕುಶಿಯೋನ್ ಕಾ ಆಶಿಯಾನಾ- ವಿಷಯಾಧಾರಿತ ಶಾರ್ಟ್ ಫೀಲ್ಮ್ ಸ್ಪರ್ಧೆ ಹಾಗೂ ಆವಾಸ್ ಫರ್ ಸಂವಾದ್- ಆಪ್‌ಲೈನ್ ಅಥವಾ ಆನ್‌ಲೈನ್ ಕಾರ್ಯಗಾರವನ್ನು ಆಯೋಜಿಸಿದೆ.

"ಫಲಾನುಭವಿಗಳ ಜೀವನದಲ್ಲಿ ತಂದ ಬದಲಾವಣೆಗಳು" ಎಂಬ ವಿಷಯದ ಮೇಲೆ ಕಿರುಚಿತ್ರ ಸ್ಪರ್ಧೆಯಲ್ಲಿ ಫಲಾನುಭವಿಗಳು, ವಿದ್ಯಾರ್ಥಿಗಳು, ಯುವಕರು, ಸಂಘ ಸಂಸ್ಥೆಗಳು ಭಾಗವಹಿಸಬಹುದಾಗಿದ್ದು <https://pmay-urban.gov.in/> ವೆಬ್‌ಸೈಟ್‌ನಲ್ಲಿ ನೊಂದಾಯಿಸಿಕೊಂಡು ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಕಿಂಬಂ(ಗ) ಆಪ್ಲಿಕೇಶನ್‌ನಲ್ಲಿ ತಾವು ಚಿತ್ರೀಕರಿಸಿದ ಕಿರುಚಿತ್ರವನ್ನು ಸೆಪ್ಟೆಂಬರ್ 10 ರೊಳಗೆ ಅಪ್‌ಲೋಡ್ ಮಾಡಬಹುದು. ಕೇಂದ್ರ ಸರ್ಕಾರವು ಸ್ಪರ್ಧೆಯ ಫಲಿತಾಂಶವನ್ನು ಸೆಪ್ಟೆಂಬರ್ 30 ರಂದು ಘೋಷಿಸುವುದು. ವಿಜೇತರಿಗೆ ಪ್ರಥಮ ಬಹುಮಾನ(ಎಲ್ಲಾ ರಾಜ್ಯದಿಂದ 25 ಜನರಿಗೆ) ರೂ.25000/-, ದ್ವಿತೀಯ ಬಹುಮಾನ(ಎಲ್ಲಾ ರಾಜ್ಯದಿಂದ 25 ಜನರಿಗೆ) ರೂ.20000/- ಹಾಗೂ ತೃತೀಯ ಬಹುಮಾನ(ಎಲ್ಲಾ ರಾಜ್ಯದಿಂದ 25 ಜನರಿಗೆ) ರೂ.12500/- ನೀಡಲಾಗುವುದು.

ಆವಾಸ್ ಫರ್ ಸಂವಾದ್- ಆಪ್‌ಲೈನ್ ಅಥವಾ ಆನ್‌ಲೈನ್ ಕಾರ್ಯಗಾರದನುಸಾರ ಶಿಕ್ಷಣ ಸಂಸ್ಥೆಗಳು/PLIಗಳು ಒಂದು ವಿಷಯದ ಮೇಲೆ ಮಾತ್ರ ಕಾರ್ಯಗಾರವನ್ನು ನಡೆಸಲು ಆಯ್ಕೆ ಮಾಡಬಹುದು. ಎಂಜಿನಿಯರ್, ಸಮಾಜ ವಿಜ್ಞಾನ, ಭೂಗೋಳಶಾಸ್ತ್ರ ವಿದ್ಯಾರ್ಥಿಗಳು, ಅರ್ಬನ್/ಟೌನ್ ಪ್ಲ್ಯಾನಿಂಗ್, ವಾಸ್ತುಶಿಲ್ಪಿಗಳು, ಮಾರ್ಕೆಟಿಂಗ್, ಮೈಕ್ರೋ ಫೈನಾನ್ಸ್, ಬೋಧಕರು, ನಗರ ಅಭ್ಯಾಸಿಗಳು, ನಾಗರಿಕ ಸಮಾಜ ಸಂಘಟನೆಗಳು, ರಿಯಲ್ ಎಸ್ಟೇಟ್ ವಲಯ, ಬ್ಯಾಂಕರ್‌ಗಳು, ಸಾರ್ವಜನಿಕ ಪ್ರತಿನಿಧಿಗಳು, ಸಮುದಾಯದ ನಾಯಕರು, ಇತರರು ಈ ಆಪ್‌ಲೈನ್ ಅಥವಾ ಆನ್‌ಲೈನ್ ಕಾರ್ಯಗಾರವನ್ನು ಸೆಪ್ಟೆಂಬರ್ 30 ರೊಳಗೆ ನಡೆಸಬಹುದು. ಆಪ್‌ಲೈನ್/ಆನ್‌ಲೈನ್‌ನಲ್ಲಿ ಕಾರ್ಯಗಾರ ನಡೆಸುವವರು ಪಿ.ಎಂ.ವೈ ವೆಬ್‌ಸೈಟ್ ಮತ್ತು ಯೂಟ್ಯೂಬ್‌ನಲ್ಲಿ ಛಾಯಾಚಿತ್ರ ಮತ್ತು ವಿಡಿಯೋ ಅಪ್‌ಲೋಡ್ ಮಾಡುವುದು. ಕಾರ್ಯಗಾರದ ವಿಷಯ/ಮುಖ್ಯಾಂಶಗಳನ್ನು ಕನಿಷ್ಠ ಒಂದು ಬ್ಲಾಗ್‌ನಲ್ಲಿ ಪೋಸ್ಟ್ ಮಾಡುವುದು, ಕಾರ್ಯಗಾರವನ್ನು ವೆಬ್‌ಸೈಟ್/ಪ್ರೆಸ್/ಫೇಸ್‌ಬುಕ್/ಟ್ವಿಟರ್ ಮೂಲಕ ಪ್ರಚಾರ ಮಾಡಬಹುದು ಹಾಗೂ ಸರ್ಕಾರದಿಂದ ದೊರೆಯುವ ಆರ್ಥಿಕ ನೆರವನ್ನು ಪಡೆಯಬಹುದು

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿಯ ದೂ.ಸಂ:7338140607 ಸಂಪರ್ಕಿಸಬಹುದೆಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಸಂಸದ ಜಿ.ಮಾದೇಗೌಡಗೆ ಶ್ರದ್ಧಾಂಜಲಿ

ಮಳವಳ್ಳಿ : ಕಾವೇರಿ ಹೋರಾಟಗಾರ ಮಾಜಿ ಸಂಸದ ಜಿ. ಮಾದೇಗೌಡರ ಶ್ರದ್ಧಾಂಜಲಿ ಸಭೆ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಸಚಿವ ಪಿ.ಎಂ ನರೇಂದ್ರಸ್ವಾಮಿ ಅವರ ನೇತೃತ್ವದಲ್ಲಿ ನಡೆಯಿತು.

ಮಾಜಿ ಸಂಸದ ಜಿ.ಮಾದೇಗೌಡರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪರ್ಚನೆ ನೆರವೇರಿಸಿದ ನಂತರ ಮಾತನಾಡಿದ ಪಿ.ಎಂ ನರೇಂದ್ರ ಸ್ವಾಮಿ, ನನ್ನ ರಾಜಕೀಯ ಪ್ರವೇಶಕ್ಕೆ ಮುನ್ನುಡಿ ಬರೆದ ಮಾದೇಗೌಡರ ಆಗಲಿಕೆ ಅಪಾರ ನೋವುಂಟು ಮಾಡಿದೆ ಎಂದು ಕಣ್ಣೀರಿಟ್ಟರು.

ಮಂಡ್ಯ ಜಿಲ್ಲೆಯ ಅಗ್ರಗಣ್ಯ ನಾಯಕರು, ಕಾವೇರಿ ಮಾತೆಯ ಸುಪುತ್ರ ಎಂದು ಪ್ರಖ್ಯಾತಿ ಪಡೆದು ಕಿರುಗಾವಲು ವಿಧಾನಸಭಾ ಕ್ಷೇತ್ರದಲ್ಲಿ ಸೋಲಿಲ್ಲದ ಸರದಾರನ್ನಾಗಿ ಮೆರೆದ ನಾಡಿಗೆ ಮಂಡ್ಯದ ಕೀರ್ತಿಯನ್ನು ಎತ್ತಿ ಹಿಡಿದ ಧೀಮಾಂತ ನಾಯಕ ಮಾದೇಗೌಡರು ಶಿವನ ಪಾದವನ್ನು ಸೇರಿ ಆತ್ಮಲಿಂಗೇಶ್ವರ ಸನ್ನಿಧಿಯಲ್ಲಿ ಲಿಂಗಕ್ಯವಾಗಿದ್ದಾರೆಂದು ಸ್ಮರಿಸಿದರು.

ಮಂಡ್ಯ ಜಿಲ್ಲಾಪಂಚಾಯಿತಿಯಲ್ಲಿ ಗದ್ದಲ ನಡೆದರೇ ಮಾದೇಗೌಡರು ಸಮಸ್ಯೆಯನ್ನು ಬಗೆಹರಿಸುತ್ತಿದ್ದರು, ರಾಜಕೀಯ, ಸಕ್ಕರೆ ಕಾರ್ಖಾನೆ ವಿಚಾರ, ಕಾವೇರಿ ಹೋರಾಟದಲ್ಲಿ ಗಟ್ಟಿ ಧ್ವನಿಯಾಗಿ ನ್ಯಾಯ ದೊರಕಿಸುವಲ್ಲಿ ಮುಂಚೂಣಿ ನಾಯಕರಾಗಿದ್ದರು, ರಾಜಕಾರಣದಲ್ಲಿ ಸುಳ್ಳುಹೇಳುವುದು, ಜನರನ್ನು ಮರಳು ಮಾಡಿ ಮಾತನಾಡುವವರನ್ನು ನೋಡಿದ್ದೇವೆ. ಆದರೇ ದಿಟ್ಟತನದ ನೇರ ನುಡಿ ಮತ್ತು ನುಡಿದಂತೆ ನಡೆದ ವಿಕ್ಕಿಕ ವ್ಯಕ್ತಿ ಮಾದೇಗೌಡರು ಆಗಿದ್ದಾರೆಂದು ತಿಳಿಸಿದರು.

1999ರಲ್ಲಿ ನಡೆದ ಚುನಾವಣೆಯಲ್ಲಿ ನನ್ನ ಬೆನ್ನೆಲಾಬಾಗಿ ನನ್ನಪರವಾಗಿ ನಿಂತರು. ಅಂದಿನಿಂದ ಇಲ್ಲಿಯವರೆಗೂ ಅವರು ನನ್ನ ಮೇಲೆ ಇಟ್ಟಿರುವ ನಂಬಿಕೆಯಂತೆ ಪ್ರಾಮಾಣಿಕ ಮತ್ತು ದಕ್ಷತೆಯಿಂದ ರಾಜಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ, ದೇವರು ಅವರ ಆತ್ಮಕ್ಕೆ ಶಾಂತಿ ದೊರಕಿಸಲಿ ಎಂದು ಪ್ರಾರ್ಥಿಸಿದರು.

ಕಾಂಗ್ರೇಸ್ ಪಕ್ಷದ ಜಿಲ್ಲಾಧ್ಯಕ್ಷ ಗಂಗಾಧರ್, ತಾಲ್ಲೂಕು ಉಸ್ತುವರಿ ರಾಮಕೃಷ್ಣ ಅಜ್ಜಹಳ್ಳಿ, ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರಾದ ದೇವರಾಜು, ಸುಂದರ್‌ರಾಜು, ಯೂತ್ ಕಾಂಗ್ರೇಸ್ ಅಧ್ಯಕ್ಷ ಕೃಷ್ಣಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸುಜಾತ ಕೆ.ಎಂಹುಟ್ಟು, ಟಿಎಪಿಸಿಎಂಎಸ್ ಅಧ್ಯಕ್ಷ ಕುಳ್ಳಚನ್ನಂಕಯ್ಯ, ನಿರ್ದೇಶಕರಾದ ದ್ಯಾಪೇಗೌಡ, ಸವಿತ, ಬಸವೇಶ್, ಲಿಂಗರಾಜು, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರಾದ ವಿಶ್ವಾಸ್, ನಾಗೇಶ್ ಹುಟ್ಟಸ್ವಾಮಿ, ಮುಖಂಡರಾದ ವಕೀಲ ಜಗದೀಶ್, ಚೌಡಯ್ಯ, ಶಿವಕುಮಾರ್, ಕಿರಣ್‌ಶಂಕರ್ ಇತರರು ಇದ್ದರು.

ಮಂಡ್ಯ ತಹಸೀಲ್ದಾರ್ ಚಂದ್ರಶೇಖರ್ ಶಂ.ಗಾಳಿ ವರ್ಗಾವಣೆ ಖಂಡಿಸಿ ಮಂಡ್ಯದಲ್ಲಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಒಂದೇ ಕುಟುಂಬದ ಮೂವರ ಧಾರುಣ ಸಾವು

ಪಾಂಡವಪುರ : ಕೇವಲ ಮೂರೇ ಮೂರು ದಿನಗಳಲ್ಲಿ ಒಂದೇ ಕುಟುಂಬದ ಮೂವರು ಸದಸ್ಯರು ಒಬ್ಬೊಬ್ಬರಂತೆ ನಿರಂತರವಾಗಿ ಸಾವನ್ನಪ್ಪಿರುವ ಘೋರ ದುರಂತ ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಿಕ್ಷಕ ಸ್ವಾಮಿ ಅವರ ತಾಯಿ ದೇವಮ್ಮ (58), ತಂದೆ ಮಹದೇವಯ್ಯ (60) ಹಾಗೂ ಪತ್ನಿ ಸುಂದರಮ್ಮ (40) ಸಾವನ್ನಪ್ಪಿದವರು.

ಘಟನೆ ವಿವರ : ಜುಲೈ 20ರಂದು ಸ್ವಾಮಿ ಅವರ ತಾಯಿ ದೇವಮ್ಮ ಅವರಿಗೆ ಉಸಿರಾಟದ ಸಮಸ್ಯೆ ಉಂಟಾಗಿ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರ ಚಿಕಿತ್ಸೆಗೆ ಸ್ಪಂದಿಸದೆ ದೇವಮ್ಮ ಸಾವನ್ನಪ್ಪಿದ್ದರು. ಜುಲೈ 22ರಂದು ಬೆಳಗ್ಗೆ ಸ್ವಾಮಿ ಅವರ ಪತ್ನಿ ಸುಂದರಮ್ಮ ಆರೋಗ್ಯ ಸಮಸ್ಯೆ ಉಂಟಾಗಿ ಅವರನ್ನು ಪಾಂಡವಪುರ ಉಪಪ್ರಾಥಮಿಕ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಹೃದಯಾಘಾತ ಕ್ಕೊಳಗಾಗಿ ಅವರು ಕೂಡ ಸಾವನ್ನಪ್ಪಿದ್ದರು. ಅದೇ ದಿನ ಸಂಜೆ ಬೆಳ್ಳೂರು ವೃತ್ತದಲ್ಲಿರುವ ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆಯಲ್ಲಿ ಕೋವಿಡ್ ಚಿಕಿತ್ಸೆ ಪಡೆಯುತ್ತಿದ್ದ ಸ್ವಾಮಿ ಅವರ ತಂದೆ ಮಹದೇವಯ್ಯ ಕೂಡ ಕೋವಿಡ್‌ನಿಂದ ಸಾವನ್ನಪ್ಪಿದ್ದಾರೆ.

ಕಾವೇರಿ ಹೋರಾಟಗಾರ ಮಾದೇಗೌಡರಿಗೆ ಶ್ರದ್ಧಾಂಜಲಿ

ಪಾಂಡವಪುರ : ಕಾವೇರಿ ಹೋರಾಟಗಾರರಾಗಿದ್ದ ದಿ.ಜಿ. ಮಾದೇಗೌಡ ಅವರು ಕೆ.ವಿ.ಶಂಕರೇಗೌಡರ ಬಳಿಕ ಜಿಲ್ಲೆಯ ಎರಡನೇ ನಿತ್ಯ ಸಚಿವರಾಗಿದ್ದರು ಎಂದು ಸಾಹಿತಿ ಚಂದ್ರಶೇಖರಯ್ಯ ಹೇಳಿದರು.

ಪಟ್ಟಣದ ಗ್ರಾಮರಂಗ ಸಾಂಸ್ಕೃತಿಕ ವೇದಿಕೆಯ ಸಂಗೀತ ಶಾಲೆಯಲ್ಲಿ ಆಯೋಜಿಸಿದ್ದ ಮಾಜಿ ಸಚಿವ ದಿ.ಜಿ.ಮಾದೇಗೌಡ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ದಿ.ಜಿ.ಮಾದೇಗೌಡರು ಕೇವಲ ರಾಜಕಾರಣಿಯಾಗಿರಲಿಲ್ಲ. ಶಿಕ್ಷ